


೫,೭

# ವಚನ ಮಂಟಪ

ಆಗಸ್ಟ್-ಸೆಪ್ಟೆಂಬರ್ ೨೦೧೮-೧೯

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

ಪೂರಣ ಯೋಜನೆ
Poorana 2018-19 Project
is Supported by Many
Individual Donors

**ಪ್ರೀತಿಯ ಮಕ್ಕಳೇ,**

೧೨ನೆಯ ಶತಮಾನದಲ್ಲಿ ನಡೆದಂತಹ ಶಿವಶರಣರ ಚಳುವಳಿಯು ಬಹಳ ಮಹತ್ವದ ಘಟನೆಯಾಗಿದೆ. ದಿನನಿತ್ಯದ ನೋವು ನಲಿವುಗಳಿಂದಲೇ ತಮ್ಮ ಅನುಭವವನ್ನು ಮತ್ತು ತಾವು ಬದುಕಿದ ರೀತಿಯನ್ನು ಬಹಳ ಸಮರ್ಥವಾಗಿ ವಚನಗಳಲ್ಲಿ ಹಿಡಿದಿಟ್ಟಿದ್ದಾರೆ. ಇಂತಹ ಶರಣರ ನಾಡಿನಲ್ಲಿ ನಾವು ಜೀವನ ಕಟ್ಟಿಕೊಳ್ಳುತ್ತಿರುವುದು, ಕಟ್ಟಿಕೊಂಡಿರುವುದು ಬಹಳ ಹೆಮ್ಮೆಯ ವಿಷಯವಾಗಿದೆ. ಸಾಸಿವೆಕಾಳಿನಷ್ಟು ಆದರೂ ಅವರು ಹಚ್ಚಿದ ಬೆಳಕು ನಮ್ಮೊಳಗೆ ನೆಲೆನಿಲ್ಲುವಂತೆ ನಾವು ಎಚ್ಚರವಹಿಸಿದರೆ ಅದಕ್ಕಿಂತಲೂ ಮಹತ್ಕಾರ್ಯ ಬೇರೊಂದಿಲ್ಲ. ಆ ದಿಕ್ಕಿನಲ್ಲಿ ನಾವೆಲ್ಲ ಹೋಗಲು ಸ್ಫೂರ್ತಿ ನೀಡಲಿ ಎಂಬ ಆಶಯದಿಂದ ಈ ವಚನ ಮಂಟಪ ನಿಮ್ಮ ಕೈಗೆ ಬರುತ್ತಿದೆ.

– ನಿಮ್ಮ ಧ್ವನಿ ಬಳಗ

# ಬಸವಣ್ಣನವರ ವಚನಗಳು

‘ವಚನಸಾಹಿತ್ಯ’ ಎಂದ ತಕ್ಷಣ ಮೊದಲು ನೆನಪಾಗುವುದು ಬಸವಣ್ಣನವರು. ಬಾಗೇವಾಡಿ ಇವರ ಜನ್ಮಗ್ರಾಮ. ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಕೂಡಲಸಂಗಮ ಬಸವಣ್ಣನ ಸಾಧನಾ ರಂಗ. ವಚನ ಚಳುವಳಿಯಲ್ಲಿ ಸಮಾಜದ ವಿವಿಧ ಸ್ತರಗಳಿಂದ ಬಂದ ಎಲ್ಲ ಸಮುದಾಯಗಳು ಒಳಗೊಳ್ಳುವಂತೆ ಮಾಡಿ ಅದಕ್ಕೆ ಬಹುದೊಡ್ಡ ಸಾಮೂಹಿಕ ಸ್ವರೂಪ ಕೊಟ್ಟವರು. ‘ಕೂಡಲಸಂಗಮದೇವ’ ಇವರ ಅಂಕಿತನಾಮ.

ಇಲ್ಲಿನ ಬಹುತೇಕ ವಚನಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು– ಇವರು ಪ್ರಕಟಿಸಿರುವ ‘ವಚನ ಸಂಪುಟ’ಗಳ ವಿವಿಧ ಹೊತ್ತಿಗೆಗಳಿಂದ ಕೃತಜ್ಞತಾ ಪೂರ್ವಕವಾಗಿ ತೆಗೆದುಕೊಳ್ಳಲಾಗಿದೆ.

೧

ವಚನದಲ್ಲಿ ನಾಮಾಮೃತ ತುಂಬಿ,
ನಯನದಲ್ಲಿ ಮೂರುತಿ ತುಂಬಿ,
ಮನದಲ್ಲಿ ನಿಮ್ಮ ನೆನಹು ತುಂಬಿ,
ಕಿವಿಯಲ್ಲಿ ಕೀರುತಿ ತುಂಬಿ,
ಕೂಡಲಸಂಗಮದೇವಾ
ನಿಮ್ಮ ಚರಣಕಮಲದೊಳಗಾನು ತುಂಬಿ.

೨

ಅಯ್ಯಾ, ನಿಮ್ಮ ಶರಣರ ಸಂಗವೆನಗೆ
ಪರಮಸುಖವಯ್ಯಾ,
ಅಯ್ಯಾ, ನಿಮ್ಮ ಶರಣರ ಅಗಲಿಕೆ
ಎನ್ನ ಪ್ರಾಣವಿಯೋಗವಯ್ಯಾ,
ಶಿವಶಿವಾ ಸಂತವಿಡುವೆನು, ಇನ್ನೆಂತಯ್ಯಾ
ಎನಗೇನು ಗತಿ, ಕೂಡಲಸಂಗಮದೇವಾ

೩

ಎನ್ನ ನಡೆಯೊಂದು ಪರಿ, ಎನ್ನ
ನುಡಿಯೊಂದು ಪರಿ,

ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ.
ನುಡಿಗೆ ತಕ್ಕ ನಡೆಯ ಕಂಡಡೆ
ಕೂಡಲಸಂಗಮದೇವನೊಳಗಿಪ್ಪನಯ್ಯಾ

೪

ಊರ ಮುಂದೆ ಹಾಲ ಹಳ್ಳ ಹರಿವುತ್ತಿರಲು,
ಒರೆಯಾವಿನ ಬೆನ್ನ ಹರಿಯಲದೇಕಯ್ಯಾ
ಲಜ್ಜೆಗೆಡಲೇಕೆ ನಾಣುಗೆಡಲೇಕೆ
ಕೂಡಲಸಂಗಮದೇವನುಳ್ಳನ್ನಕ್ಕ
ಬಿಜ್ಜಳನ ಭಂಡಾರವೆನಗೇಕಯ್ಯಾ.

೫

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ ಮೆಚ್ಚನಾ
ನಮ್ಮ ಕೂಡಲ ಸಂಗಮದೇವ.

೬
ಏನಿ ಬಂದಿರಿ, ಹದುಳಿದ್ದಿರೆ ಎಂದಡೆ
ನಿ(ಮ್ಮೈ)ಸಿರಿ ಹಾರಿ ಹೋಹುದೆ?
ಕುಳ್ಳಿರೆಂದಡೆ ನೆಲ ಕುಳಿಹೋಹುದೆ?
ಒಡನೆ ನುಡಿದಡೆ ಸಿರ, ಹೊಟ್ಟೆಯೊಡೆವುದೆ?
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ
ಮೂಗ ಕೊಯ್ವುವ ಮಾಬನೆ
ಕೂಡಲಸಂಗಮದೇವಯ್ಯ?

೭
ಜಗದಗಲ ಮುಗಿಲಗಲ ಮಿಗೆಯಗಲ
ನಿಮ್ಮಗಲ,
ಪಾತಾಳದಿಂದವೆ ಅತ್ತತ್ತ ನಿಮ್ಮ ಶ್ರೀಚರಣ,
ಬ್ರಹ್ಮಾಂಡದಿಂದವೆ ಅತ್ತತ್ತ ನಿಮ್ಮ ಶ್ರೀಮುಕುಟ,
ಅಗಮ್ಯ, ಅಗೋಚರ, ಅಪ್ರತಿಮ ಲಿಂಗವೇ,
ಕೂಡಲಸಂಗಮದೇವಯ್ಯಾ.
ಎನ್ನ ಕರಸ್ಥಲಕೆ ಬಂದು ಚುಳುಕಾದಿರಯ್ಯಾ.

ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು,
ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ,
ಉಂಬ ಜಂಗಮ ಬಂದಡೆ ನಡೆಯೆಂಬರು,
ಉಣ್ಣದ ಲಿಂಗಕ್ಕೆ ಬೋನವ
ಹಿಡಿಯೆಂಬರಯ್ಯಾ.
ನಮ್ಮ ಕೂಡಲಸಂಗನ ಶರಣರ ಕಂಡು
ಉದಾಸೀನವ ಮಾಡಿದಡೆ,
ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ.

೯

ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ,
ಸಕಲ ವಿಸ್ತಾರದ ರೂಹು ನೀನೇ ದೇವಾ,
'ವಿಶ್ವತಶ್ಚಕ್ಷು' ನೀನೇ ದೇವಾ,
'ವಿಶ್ವತೋಮುಖ' ನೀನೇ ದೇವಾ,
'ವಿಶ್ವತೋಬಾಹು' ನೀನೇ ದೇವಾ,
'ವಿಶ್ವತಃಪಾದ' ನೀನೇ ದೇವಾ,
ಕೂಡಲಸಂಗಮದೇವಾ.

# ಆಯ್ದಕ್ಕಿ ಲಕ್ಕಮ್ಮನ ವಚನಗಳು

ಶರಣರು ರೂಪಿಸಿದ ಕಾಯಕ ಮತ್ತು ದಾಸೋಹ ತತ್ವಗಳನ್ನು ಬದುಕಿನ ಮುಖ್ಯ ಮೌಲ್ಯವನ್ನಾಗಿ ಸ್ವೀಕರಿಸಿದ ಲಕ್ಕಮ್ಮ ಶರಣಶ್ರೇಷ್ಠ ಆಯ್ದಕ್ಕಿ ಮಾರಯ್ಯನ ಪತ್ನಿ.

ರಾಯಚೂರ ಜಿಲ್ಲೆಯ ಅಂಗಸೂರು ತಾಲೂಕ ಅಮರೇಶ್ವರ ಗ್ರಾಮ ಇವರ ಹುಟ್ಟೂರು. ಕಲ್ಯಾಣಕ್ಕೆ ಬಂದು, ಅಲ್ಲಿ ಮಹಾಮನೆಯ ಅಂಗಳದಲ್ಲಿ ಬಿದ್ದ ಅಕ್ಕಿಯನ್ನು ಆಯ್ದು ಸರಳ, ಸುಂದರ ಹಾಗೂ ಅರ್ಥಪೂರ್ಣವಾಗಿ ಬದುಕುವ ಕಾಯಕವನ್ನು ಕೈಕೊಳ್ಳುತ್ತಾರೆ.

ಆಯ್ದಕ್ಕಿ ಲಕ್ಕಮ್ಮನ ಅಂಕಿತನಾಮ 'ಮಾರಯ್ಯಪ್ರಿಯ ಅಮರೇಶ್ವರಲಿಂಗ'.

೧

ಅಂಗಕ್ಕೆ ಬಡತನವಲ್ಲದೆ ಮನಕ್ಕೆ
ಬಡತನವುಂಟೆ ?
ಬೆಟ್ಟ ಬಲ್ಲಿತ್ತೆಂದಡೆ, ಉಳಿಯ ಮೊನೆಯಲ್ಲಿ
ಬಡತನವಿದ್ದಡೆ ಒಡೆಯದೆ ?
ಘನಶಿವಭಕ್ತರಿಗೆ ಬಡತನವಿಲ್ಲ ಸತ್ಯರಿಗೆ
ದುಷ್ಕರ್ಮವಿಲ್ಲ.
ಎನಗೆ ಮಾರಯ್ಯಪ್ರಿಯ
ಅಮಲೇಶ್ವರಲಿಂಗವುಳ್ಳನ್ನಕ್ಕ ಆರ ಹಂಗಿಲ್ಲ
ಮಾರಯ್ಯಾ.

೨

ಮನ ಶುದ್ಧವಿಲ್ಲದವಂಗೆ ದ್ರವ್ಯದ
ಬಡತನವಲ್ಲದೆ, ಚಿತ್ತಶುದ್ಧದಲ್ಲಿ ಕಾಯಕವ
ಮಾಡುವಲ್ಲಿ
ಸದ್ಭಕ್ತಂಗೆ ಎತ್ತ ನೋಡಿದಡತ್ತ
ಲಕ್ಷ್ಮಿ ತಾನಾಗಿಪ್ಪಳು
ಮಾರಯ್ಯಪ್ರಿಯ ಅಮಲೇಶ್ವರಲಿಂಗದ
ಸೇವೆಯುಳ್ಳನ್ನಕ್ಕರ.

೩

ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು;
ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ;
ಕೊಡದೆ ತ್ಯಾಗಿ ಎನಿಸಿಕೊಂಬುದು
ಮುಡಿಯಿಲ್ಲದ ಶೃಂಗಾರ;
ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲ್ಲಿ
ಸುಜಲವ ತುಂಬಿದಂತೆ,
ಮಾರಯ್ಯಪ್ರಿಯ ಅಮಲೇಶ್ವರಲಿಂಗವ
ಮುಟ್ಟದ ಭಕ್ತಿ.

೪

ಆಸೆಯೆಂಬುದು ಅರಸಿಂಗಲ್ಲದೆ,
ಶಿವಭಕ್ತರಿಗುಂಟೆ  ಅಯ್ಯಾ?
ರೋಷವೆಂಬುದು
ಯಮದೂತರಿಗಲ್ಲದೆ,
ಅಜಾತರಿಗುಂಟೆ ಅಯ್ಯಾ?
ಈಸಕ್ಕಿಯಾಸೆ ನಿಮಗೇಕೆ?
ಈಶ್ವರನೊಪ್ಪ. ಮಾರಯ್ಯಪ್ರಿಯ
ಅಮಲೇಶ್ವರಲಿಂಗಕ್ಕೆ ದೂರ ಮಾರಯ್ಯ.

೫

ಮಾಡಿ ನೀಡಿ ಹೋದೆನೆಂಬಾಗ ಕೈಲಾಸವೇನು
ಕೈಕೂಲಿಯೆ?
ಮುಂದೊಂದ ಕಲ್ಪಿಸದೆ, ಹಿಂದೊಂದ
ಭಾವಿಸದೆ ಸಲೆಸಂದಿದ್ದಾಗವೆ
ಮಾರಯ್ಯಪ್ರಿಯ ಅಮಲೇಶ್ವರಲಿಂಗವಿದ್ದ
ಠಾವೆ ಕೈಲಾಸ.

೬

ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ,
ಇದು ನಿಮ್ಮ ಮನವೊ, ಬಸವಣ್ಣನ
ಅನುಮಾನದ ಚಿತ್ತವೊ?
ಈ ಮಾತು ಮಾರಯ್ಯಪ್ರಿಯ
ಅಮಲೇಶ್ವರಲಿಂಗಕ್ಕೆ ಸಲ್ಲದಬೋನ. ಅಲ್ಲಿಯೇ
ಸುರಿದು ಬನ್ನಿ ಮಾರಯ್ಯಾ

# ಅಕ್ಕಮಹಾದೇವಿಯ ವಚನಗಳು

ವಚನಸಾಹಿತ್ಯ ಕಾಲದ ಸ್ತ್ರೀಯರಲ್ಲಿ ಮೊದಲು ನೆನಪಾಗುವ ಹೆಸರು ಅಕ್ಕಮಹಾದೇವಿಯದು. ಈಕೆಯ ಜನ್ಮಸ್ಥಳ ಉಡುತಡಿ. ಅಕ್ಕಮಹಾದೇವಿ ಒಬ್ಬ ಶ್ರೇಷ್ಠ ವಚನಕಾರ್ತಿ. 'ಚೆನ್ನಮಲ್ಲಿಕಾರ್ಜುನ' ಎಂಬುದು ಈಕೆಯ ಅಂಕಿತ ನಾಮ.

೧

ನಾಳೆ ಬರುವುದು ನಮಗಿಂದೆ ಬರಲಿ,
ಇಂದು ಬರುವುದು ನಮಗೀಗಲೆ ಬರಲಿ ;
ಆಗೀಗ ಎನ್ನದಿರೊ, ಚೆನ್ನಮಲ್ಲಿಕಾರ್ಜುನಾ.

೨

ಮಧ್ಯಾಹ್ನದಿಂದ ಮೇಲೆ ಹಿರಿಯರಿಲ್ಲ.
ಅಸ್ತಮಾನದಿಂದ ಮೇಲೆ ಜಿತೇಂದ್ರಿಯರಿಲ್ಲ.
ವಿಧಿಯ ಮೀರುವ ಅಮರರಿಲ್ಲ.
ಕ್ಷುಧೆ ವಿಧಿ ವ್ಯಸನಕ್ಕಂಜಿ,

ನಾ ನಿಮ್ಮ ಮರೆಹೊಕ್ಕು ಬದುಕಿದೆನು
ಚೆನ್ನಮಲ್ಲಿಕಾರ್ಜುನಾ.

೩

ಉಡುವೆ ನಾನು ಲಿಂಗಕ್ಕೆಂದು,
ತೊಡುವೆ ನಾನು ಲಿಂಗಕ್ಕೆಂದು,
ಮಾಡುವೆ ನಾನು ಲಿಂಗಕ್ಕೆಂದು,
ನೋಡುವೆ ನಾನು ಲಿಂಗಕ್ಕೆಂದು,
ಎನ್ನಂತರಂಗ ಬಹಿರಂಗಗಳು ಲಿಂಗಕ್ಕಾಗಿ.
ಮಾಡಿಯೂ ಮಾಡದಂತಿಪ್ಪೆ ನೋಡಾ.
ಆನೆನ್ನ ಚೆನ್ನಮಲ್ಲಿಕಾರ್ಜುನನೊಳಗಾಗಿ
ಹತ್ತರೊಡನೆ ಹನ್ನೊಂದಾಗಿಪ್ಪುದನೇನ
ಹೇಳುವೆನವ್ವಾ?

೪

ಈಳೆ ನಿಂಬೆ ಮಾವು ಮಾದಲಕೆ
ಹುಳಿನೀರನೆರೆದವರಾರಯ್ಯಾ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ
ಸಿಹಿನೀರನೆರೆದವರಾರಯ್ಯಾ?

ಕಳವೆ ರಾಜಾನ್ನ ಶಾಲ್ಯನ್ನಕ್ಕೆ
ಓಗರದ ಉದಕವನೆರೆದವರಾರಯ್ಯಾ?
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ
ಪರಿಮಳದುದಕವನೆರೆದವರಾರಯ್ಯಾ?
ಇಂತೀ ಜಲವು ಒಂದೆ, ನೆಲವು ಒಂದೆ,
ಆಕಾಶವು ಒಂದೆ.
ಜಲವು ಹಲವು ದ್ರವ್ಯಂಗಳ ಕೂಡಿ
ತನ್ನ ಪರಿಬೇರಾಗಿಹ ಹಾಗೆ,
ಎನ್ನದೇವ ಚೆನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದಡೇನು?
ತನ್ನ ಪರಿ ಬೇರೆ.

ಙ

ಅಳಿಸಂಕುಲವೆ, ಮಾಮರವೆ, ಬೆಳುದಿಂಗಳೆ,
ಕೋಗಿಲೆಯೆ
ನಿಮ್ಮನೆಲ್ಲರನೂ ಒಂದ ಬೇಡುವೆನು.
ಎನ್ನೊಡೆಯ ಚೆನ್ನಮಲ್ಲಿಕಾರ್ಜುನದೇವ
ಕಂಡಡೆ ಕರೆದು ತೋರಿದೆ.

೬

ಅಕ್ಕ ಕೇಳೌ, ನಾನೊಂದು ಕನಸ ಕಂಡೆ.
ಅಕ್ಕಿ ಅಡಕೆ ಓಲೆ ತೆಂಗಿನಕಾಯಿ ಕಂಡೆ.
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವಾ.
ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು.
ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು.

೭

ಮರವಿದ್ದು ಫಲವೇನು ನೆರಳಿಲ್ಲದನ್ನಕ್ಕ?
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ?
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ?
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ?
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ?
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ
ಚೆನ್ನಮಲ್ಲಿಕಾರ್ಜುನಾ?

೮

ವನವೆಲ್ಲಾ ನೀನೆ, ವನದೊಳಗಣ

ದೇವತರುವೆಲ್ಲಾ ನೀನೆ,
ತರುವಿನೊಳಗಾಡುವ ಖಗಮೃಗವೆಲ್ಲಾ ನೀನೆ.
ಚೆನ್ನಮಲ್ಲಿಕಾರ್ಜುನಾ,
ಸರ್ವಭರಿತನಾಗಿ ಎನಗೇಕೆ ಮುಖದೋರೆ?

೯

ಹಸಿವಾದಡೆ ಊರೊಳಗೆ ಭಿಕ್ಷಾನ್ನಗಳುಂಟು.
ತೃಷೆಯಾದಡೆ ಕೆರೆ ಹಳ್ಳ ಬಾವಿಗಳುಂಟು.
ಅಂಗಶೀತಕ್ಕೆ ಬೀಸಾಟ ಅರಿವೆಗಳುಂಟು.
ಶಯನಕ್ಕೆ ಹಾಳು ದೇಗುಲಗಳುಂಟು.
ಚೆನ್ನಮಲ್ಲಿಕಾರ್ಜುನಯ್ಯಾ,
ಆತ್ಮಸಂಗಾತಕ್ಕೆ ನೀನೆನಗುಂಟು.

# ಅಂಬಿಗರ ಚೌಡಯ್ಯ

12ನೇ ಶತಮಾನದಲ್ಲಿ ಜೀವಿಸಿದ್ದ ಶಿವಶರಣ ಹಾಗೂ ವಚನಕಾರರು. ಉಳಿದೆಲ್ಲ ವಚನಕಾರರಿಗಿಂತ ಭಿನ್ನ ಹಾಗೂ ವಿಶಿಷ್ಟ ವ್ಯಕ್ತಿತ್ವ ಇವರದು. ವೃತ್ತಿಯಿಂದ ಅಂಬಿಗ, ಪ್ರವೃತ್ತಿಯಲ್ಲಿ ಅನುಭಾವಿ. ನೇರ ನಿರ್ಭೀತ ನುಡಿಗಳಿಂದ ವಚನಗಳನ್ನು ಬರೆದಿರುವುದು ಗೋಚರಿಸುತ್ತದೆ. ಇವರ ವಚನಗಳ ಅಂಕಿತ “ಅಂಬಿಗರ ಚೌಡಯ್ಯ”.

೧

ಅಂಬಿಗ ಅಂಬಿಗ ಎಂದು ಕುಂದ
ನುಡಿಯದಿರು,
ನಂಬಿದರೆ ಒಂದೆ ಹುಟ್ಟಲಿ
ಕಡೆಯ ಹಾಯಿಸುವನಂಬಿಗರ ಚೌಡಯ್ಯ.

೨

ಕೇಳಿದೇನೆಲೆ ಮಾನವ,
ಪಂಚಮಹಾಪಾತಕ ದೋಷಾದಿಗಳನ್ನು
ಮಾಡಿ
ಬಾಯೆಲೆ 'ಶಿವ ಶಿವ' ಎಂದು ಶಿವನ ನೆನೆದರೆ
ಭವ ಹರಿಯಿತೆಂಬ ವಿಚಾರಗೇಡಿಗಳ ಮಾತು
ಕೇಳಲಾಗದು.
ಜ್ಯೋತಿಯ ನೆನೆದರೆ ಕತ್ತಲೆ ಹಿಂಗುವುದೇ?
ಮೃಷ್ಟಾನ್ನವ ನೆನೆದರೆ ಹೊಟ್ಟೆ ತುಂಬುವುದೆ?

೩

ಕಲ್ಲಿನಲ್ಲಿ ಕಠಿಣ, ಖುಲ್ಲರಲ್ಲಿ ದುರ್ಗುಣ,
ಬಲ್ಲವರಲ್ಲಿ ಸುಗುಣ ಉಂಟೆಂದೆಲ್ಲರೂ
ಬಲ್ಲರು.
ಇಂತೀ ಇವು ಎಲ್ಲರ ಗುಣ.
ಅಲ್ಲಿಗಲ್ಲಿಗೆ ಸರಿಯೆಂದು ಗೆಲ್ಲ ಸೋಲಕ್ಕೆ
ಹೋರದೆ
ನಿಜವೆಲ್ಲಿತ್ತು ಅಲ್ಲಿಯೆ ಸುಖವೆಂದನಂಬಿಗ
ಚೌಡಯ್ಯ.

# ಅಲ್ಲಮಪ್ರಭುಗಳ ವಚನಗಳು

ಬಸವಣ್ಣನವರ ಹಿರಿಯ ಸಮಕಾಲೀನ ವಚನಕಾರರಲ್ಲಿ ಅಲ್ಲಮಪ್ರಭುಗಳ ಹೆಸರು ಅಗ್ರಗಣ್ಯ. ಶಿವಮೊಗ್ಗ ಜಿಲ್ಲೆಯ ಇವತ್ತಿನ ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವೆ ಇವರ ಜನ್ಮಸ್ಥಳ. 'ಗುಹೇಶ್ವರ' ಎಂಬ ನಾಮಾಂಕಿತ ಇವರದು.

೧

ಏನ ಕಂಡಡೇನಯ್ಯಾ, ತನ್ನ ಕಾಣದಾತ
ಕುರುಡ.
ಏನ ಕೇಳಿದಡೇನಯ್ಯಾ ತನ್ನ ಕೇಳದಾತ
ಕಿವುಡ.
ಏನ ಮಾತಾಡಿದಡೇನಯ್ಯಾ ತನ್ನ
ಮಾತಾಡದಾತ ಮೂಕ.
ದಿಟದಿಂತ ತನ್ನ ತಾ ಕಾಣಬೇಕು, ದಿಟದಿಂದ
ತನ್ನ ತಾ ಕೇಳಬೇಕು,
ದಿಟದಿಂದ ತನ್ನ ತಾ ಮಾತಾಡಬೇಕು.
ಇದೇ ತನ್ನ ನೆಲೆ, ಸ್ವಭೂಮಿ, ಸ್ವಸ್ವರೂಪು
ಕಾಣಾ ಗುಹೇಶ್ವರಾ

**ಧ್ವನಿ ಶೈ.ಸಂ.ಕೇಂದ್ರ/ ಪೂ.ಯೋ/೧೮–೧೯– ಆ–ಸೆ /ವಚನಮಂಟಪ –೧೯**

೨

ಎನಗೊಂದು ಲಿಂಗ
ನಿನಗೊಂದು ಲಿಂಗ
ಮನೆಗೊಂದು ಲಿಂಗವಾಯಿತು.
ಹೋಯಿತಲ್ಲಾ ಭಕ್ತಿ ಜಲವ ಕೂಡಿ.
ಉಳಿ ಮುಟ್ಟದ ಲಿಂಗವ ಮನ ಮುಟ್ಟಬಲ್ಲುದೆ
ಗುಹೇಶ್ವರಾ.

೩

ಆಸೆಗೆ ಸತ್ತುದು ಕೋಟಿ!
ಆಮಿಷಕ್ಕೆ ಸತ್ತುದು ಕೋಟಿ!
ಹೊನ್ನು–ಹೆಣ್ಣು–ಮಣ್ಣಿಂಗೆ
ಸತ್ತುದು ಕೋಟಿ!
ಗುಹೇಶ್ವರ.
ನಿಮಗಾಗಿ ಸತ್ತವರನಾರನೂ ಕಾಣೆ!!

# ಜೇಡರ ದಾಸಿಮಯ್ಯನ ವಚನಗಳು

ವಚನಕಾರರಲ್ಲಿ ಮೊದಲಿಗ ಜೇಡರ ದಾಸಿಮಯ್ಯ. ಇವರ ಊರು ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಬಿ. ಮುದನೂರು. ಇವರ ಹೆಂಡತಿ ದುಗ್ಗಳೆ. ವೃತ್ತಿಯಲ್ಲಿ ನೇಯ್ಗೆಯವರು. ಇವರ ವಚನಗಳ ಮುಖ್ಯಗುಣ ಸಂಕ್ಷಿಪ್ತತೆ, ಸರಳತೆ ಹಾಗೂ ಅರ್ಥಪ್ರಚುರತೆ. 'ರಾಮನಾಥ' ಇವರ ಕಾವ್ಯನಾಮ.

೧

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ,
ಸುಳಿದು ಬೀಸುವ ವಾಯು ನಿಮ್ಮ ದಾನ
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ, ರಾಮನಾಥ.

೨

ಎತ್ತು ನಿಮ್ಮ ದಾನ; ಬಿತ್ತು ನಿಮ್ಮ ದಾನ.
ಸುತ್ತಿ ಹರಿವ ಸಾಗರವೆಲ್ಲ ನಿಮ್ಮ ದಾನ.
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ ಹೇಳ? ರಾಮನಾಥ.

೩

ಇಂದಿಂಗೆಂತು ನಾಳಿಂಗೆಂತೆಂದು
ಚಿಂತಿಸಲೇಕೆ? ತಂದಿಕ್ಕುವ ಶಿವಂಗೆ
ಬಡತನವೆ ರಾಮನಾಥ.

೪

ಹಸಿವಿಲ್ಲದ ಬೊಂಬೆಗೆ ತೃಷೆಯಿಲ್ಲದ
ನೀರೆರೆದು
ಮಸಕವಿಲ್ಲದ ಮಾತ ಮನದಲ್ಲಿ ಹೇಳಿ
ಹೆಸರಿಲ್ಲದೆ ಕರೆದಡೆ ಓ ಎಂದವ ನೀನೊ
ನಾನೋ ರಾಮನಾಥ.

# ನೀಲಮ್ಮನ ವಚನಗಳು

ನೀಲಮ್ಮ(ನೀಲಾಂಬಿಕೆ) ಬಸವಣ್ಣನವರ ಎರಡನೆಯ ಹೆಂಡತಿ. ವಚನ ಕ್ರಾಂತಿಯಲ್ಲಿ ಬಸವಣ್ಣನಿಗೆ ಜೊತೆಯಾಗಿ ಹೆಜ್ಜೆ ಹಾಕಿದ್ದಾಳೆ. ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಇವಳು ತಂಗಡಿಯಲ್ಲಿ ಐಕ್ಯಳಾದಳೆಂದು ಪ್ರತೀತಿಯಿದೆ. 'ಸಂಗಯ್ಯ' ಎಂಬುದು ಈಕೆಯ ಅಂಕಿತ ನಾಮ.

೧

ಅಲ್ಲಮನ ವಂಶದವಳು ನಾನು.
ಆಜಾತ ಶರಣರ ವಂಶದವಳು ನಾನು.
ಅಪ್ರತಿಮ ಶರಣರ ವಂಶದವಳು ನಾನು.
ಆಗಮಾನಂದಿಗಳ ವಂಶದವಳಾನು.
ನಾನು ಆವ ದೇಶದಲ್ಲಿಯಿದ್ದಡೇನು?
ನಾನು ಆವಸ್ಥಾನದಲ್ಲಿಯಿದ್ದಡೇನು?
ಸಂಗಯ್ಯನಲ್ಲಿ ಬಸವ ಸ್ವಯಲಿಂಗಿಯಾದನು.

# ನಾಗಲಾಂಬಿಕೆಯ ವಚನಗಳು

ಶಿವಶರಣೆಯರ ಸಮೂಹದಲ್ಲಿ ನಾಗಲಾಂಬಿಕೆಯೂ ಪ್ರಮುಖಳು. ಬಸವಣ್ಣನವರ ಸಹೋದರಿ ಈಕೆ. 'ಬಸವಣ್ಣಪ್ರಿಯ ಚೆನ್ನಸಂಗಯ್ಯ' ಎಂಬುದು ಈಕೆಯ ಅಂಕಿತ ನಾಮವಾಗಿದೆ.

೧

ಎನ್ನ ತನು ಚೆನ್ನಬಸವಣ್ಣನ
ಬಯಲ ಬೆರಸಿತ್ತು.
ಎನ್ನ ಮನ ಸಂಗನಬಸವಣ್ಣನ ನಿಜಪದವ
ಬೆರಸಿತ್ತು.
ಎನ್ನ ಪ್ರಾಣ ಅಲ್ಲಮಪ್ರಭುದೇವರ ಅರಿವ
ಬೆರಸಿತ್ತು.
ಇಂತೀ ಮೂವರು ಒಂದೊಂದ
ಹಂಚಿಕೊಂಡ ಕಾರಣ,
ಎನಗೇನೂ ಇಲ್ಲದೆ, ಬಸವಣ್ಣಪ್ರಿಯ
ಚೆನ್ನಸಂಗಯ್ಯನ ಹೃದಯಕಮಲದಲ್ಲಿ
ನಿಜನಿವಾಸಿಯಾಗಿದ್ದೆನು.

# ಮಡಿವಾಳ ಮಾಚಯ್ಯನವರ ವಚನಗಳು

ಬಸವಣ್ಣನವರ ಮಹಾಮನೆಯ ಹಿರಿಯ ಚೇತನ ಶರಣ ಮಡಿವಾಳ ಮಾಚಯ್ಯ. ಶಿವಶರಣರ ಬಟ್ಟೆಗಳನ್ನು ಒಗೆಯುವ(ಮಡಿ ಮಾಡುವ) ಕಾಯಕ ಇವರದು. ಇವರ ಜನ್ಮಕ್ಷೇತ್ರ ವಿಜಾಪುರ ಜಿಲ್ಲೆಯ ಹಿಪ್ಪರಗಿ, ಕಾರ್ಯಕ್ಷೇತ್ರ ಕಲ್ಯಾಣ. 'ಕಲಿದೇವರ ದೇವ' ಎಂಬುದು ಈತನ ಅಂಕಿತನಾಮ.

೧

ಉಡಿಯ ಲಿಂಗವ ಬಿಟ್ಟು,
ಗುಡಿಯ ಲಿಂಗಕ್ಕೆ ಶರಣೆಂಬ
ಮತಿಭ್ರಷ್ಟರನೇನೆಂಬೆನಯ್ಯಾ
ಕಲಿದೇವರದೇವ.

೨

ಸಿಂಹದ ಮುಂದೆ ಜಿಂಕೆಯ ಜಿಗಿದಾಟವೆ?
ಪ್ರಳಯಾಗ್ನಿಯ ಮುಂದೆ ಪತಂಗದಾಟವೆ?
ಸೂರ್ಯನ ಮುಂದೆ ಕೀಟದಾಟವೆ?
ನಿಮ್ಮ ಮುಂದೆ ಎನ್ನಾಟವೆ,
ಕಲಿದೇವರದೇವಾ?

# ಮನಸಂದ ಮಾರಿತಂದೆಯ ವಚನಗಳು

ಮನಸಂದ ಮಾರಿತಂದೆಯ ಚರಿತ್ರೆಯ ವಿವರಗಳು ದೊರೆಯುವುದಿಲ್ಲ. ಇವರ ವಚನಗಳು ಗಾತ್ರದಲ್ಲಿ ಚಿಕ್ಕವಾಗಿದ್ದು, ಉನ್ನತ ವಿಚಾರಗಳನ್ನು ನಿರೂಪಿಸುತ್ತವೆ. ಈ ವಚನಕಾರನ ಅಂಕಿತ ನಾಮ 'ಮನಸಂದಿತ್ತು ಮಾರೇಶ್ವರ' ಎಂಬುದಾಗಿದೆ.

೧

ರಾಜನ ಭಕ್ತಿ ತಾಮಸದಿಂದ
ಕೆಟ್ಟಿತ್ತು.
ಪಂಡಿತನ ಯುಕ್ತಿ ಖಂಡನವಿಲ್ಲದೆ ನಿಂದಿತ್ತು.
ಸುಸಂಗಿಯ ನಿರಂಗ ದುಸ್ಸಂಗದಿಂದ ಕೆಟ್ಟಿತ್ತು.
ಪತಂಗನಂತಾಗದೆ ಮುನ್ನವೆ
ನಿನ್ನ ನೀನರಿ.
ಅರಿದಡೆ ನಿನಗಿದಿರಿಲ್ಲ, ಮನಸಂದಿತ್ತು
ಮಾರೇಶ್ವರಾ.

೨

ನಡೆವಾತನ ಕಾಲ ಕೊಯಿದು,
ನುಡಿವಾತನ ನಾಲಗೆಯ ತುಂಡಿಸಿ
ಕೊಡುವಾತನ ಕೈಯ ಮುರಿದು,
ಕೊಂಡಾಡುವಾತನ ತಲೆಯ ಕುಟ್ಟಿ,
ಮೀರಿ ನಿಂದುದು, ಮನಸಂದಿತ್ತು
ಮಾರೇಶ್ವರಾ.

# ಬಾಚಿಕಾಯಕದ ಬಸವಣ್ಣನ ವಚನ

ಬಾಚಿಕಾಯಕದ ಬಸವಣ್ಣನು ಬಡಗಿ ಕಾಯಕ ಮಾಡುತ್ತಿದ್ದ. ಗಾತ್ರದಲ್ಲಿ ದೀರ್ಘವಾಗಿರುವುದು ಇವರ ವಚನಗಳ ಒಂದು ವೈಶಿಷ್ಟ್ಯ. ಇವರ ಅಂಕಿತ ನಾಮ 'ಬಸವಪ್ರಿಯ ವಿಶ್ವಕಮ್ಮಟಕ್ಕೆ ಕಾಳಿಕಾ ವಿಮಲ ರಾಜೇಶ್ವರ ಲಿಂಗ'.

೧

ಆಸೆಯ ಬಿಟ್ಟಡೆ ಭಕ್ತರೆಂಬೆ.
ವೇಷವ ಬಿಟ್ಟಡೆ ಮಾಹೇಶ್ವರರೆಂಬೆ.
ಭವಪಾಶವ ಬಿಟ್ಟಡೆ ಪ್ರಸಾದಿಯೆಂಬೆ.
ಭಾವ ಘಟಿಸಿದಡೆ ಪ್ರಾಣಲಿಂಗಿಯೆಂಬೆ.
ಬಯಕೆ ನಿಂದಡೆ ಶರಣನೆಂಬೆ.
ಅರಿವು ಶೂನ್ಯವಾದಡೆ ಐಕ್ಯನೆಂಬೆ.
ಈ ಷಡುಸ್ಥಲದ ಮಹಾಸ್ಥಲದಲ್ಲಿ ಒಡಗೂಡಿ
ನಿಂದುದ ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ
ಕಾಳಿಕಾವಿಮಲ
ರಾಜೇಶ್ವರಲಿಂಗಕ್ಕಲ್ಲದೆ ಇಲ್ಲವೆಂಬೆ.

# ಬಹುರೂಪಿ ಚೌಡಯ್ಯನ ವಚನ

ಬಹುರೂಪಿ ಚೌಡಯ್ಯನು ತನ್ನ ಹೆಚ್ಚಿನ ವಚನಗಳಲ್ಲಿ ಬಸವಣ್ಣನವರನ್ನೇ ಸ್ತುತಿಸಿರುತ್ತಾರೆ. ರೇಕಳಿಕೆ ಇವರ ಗ್ರಾಮ. 'ರೇಕಣ್ಣಪ್ರಿಯ ನಾಗಿನಾಥ' ಎಂಬುದು ಇವರ ಅಂಕಿತನಾಮು.

೧

ನನಗೆ ನಾನೆ ಗುರುವಾದೆನಯ್ಯಾ.
ನನಗೆ ನಾನೆ ಲಿಂಗವಾದೆನಯ್ಯಾ.
ನನಗೆ ನಾನೆ ಜಂಗಮವಾದೆನಯ್ಯಾ.
ನನಗೆ ನಾನೆ ಪ್ರಸಾದವಾದೆನಯ್ಯಾ.
ನನಗೆ ನಾನೆ ಭಕ್ತನಾದೆನಯ್ಯಾ.
ರೇಕಣ್ಣಪ್ರಿಯ ನಾಗಿನಾಥನಲ್ಲಿ
ಆಗುಹೋಗನರಿಯೆನಯ್ಯಾ.

# ಘಟ್ಟಿವಾಳಯ್ಯನ ವಚನ

ಘಟ್ಟಿವಾಳಯ್ಯನನ್ನು ಘಟ್ಟಿವಾಳ ಮದ್ದಣ್ಣ ಎಂದೂ ಕರೆಯುತ್ತಾರೆ. ಮದ್ದಣ್ಣನು ಮದ್ದಳೆ ನುಡಿಸುವ ಕಾಯಕವನ್ನು ಮಾಡುತ್ತಿದ್ದರು. ಇವರ ಅಂಕಿತನಾಮ 'ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ' ಎಂಬುದಾಗಿದೆ.

೧

ರೋಗಿಗೆ ಹಾಲು ಸಿಹಿಯಪ್ಪುದೆ?
ಗೂಗೆಗೆ ರವಿ ಲೇಸಪ್ಪುದೆ?
ಚೋರಗೆ ಬೆಳಗು ಗುಣವಪ್ಪುದೆ?
ಭವಸಾಗರದ ಸಮಯದಲ್ಲಿದ್ದವರು
ನಿರ್ಭಾವನ ಭಾವವನೆತ್ತ ಬಲ್ಲರು?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ.

# ಚಂದಿಮರಸನ ವಚನ

ಚಂದಿಮರಸನು ಕೃಷ್ಣಾ ನದೀತೀರದ ಚಿಮ್ಮಲಿಗಿ ಎಂಬ ಗ್ರಾಮದವರು. ಇವರ ವಚನಗಳನ್ನು ನೋಡಿದಾಗ ಆತ್ಮಜ್ಞಾನದ ಬಗೆಗೇ ಅವರಿಗೆ ಹೆಚ್ಚಿನ ಒಲವಿರುವಂತೆ ತೋರುತ್ತದೆ. 'ಸಿಮ್ಮಲಿಗೆಯ ಚೆನ್ನರಾಮಾ' ಎಂಬುದು ಇವರ ಅಂಕಿತನಾಮ.

೧

ಸಾವು ತಡವಲ್ಲ, ನರಕ ದೂರವಲ್ಲ,
ಕೆಮ್ಮನೆ ಕೆಡಬೇಡ.
ವಿಷಯವ ಬಿಡು, ಗುರುಭಕ್ತಿಯ ನಂಬು
ಸುಖಿಯಪ್ಪೆ,
ಸಿಮ್ಮಲಿಗೆಯ ಚೆನ್ನರಾಮಾ.

# ಸತ್ಯಕ್ಕನ ವಚನ

ಸತ್ಯಕ್ಕ ಏಕದೇವತಾ ನಿಷ್ಠೆಯ ನಿಟ್ಟೆರಗಿನಲ್ಲಿ ಬದುಕಿದ ಸತ್ಯಶರಣೆ. ಈಕೆಯ ಸ್ಥಳ ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪ ಸಮೀಪದ ಹಿರೇಜಂಬೂರು. 'ಶಿವಶಬ್ದವನ್ನಲ್ಲದೆ ಅನ್ಯದೈವದ ಶಬ್ದವ ಕೇಳೆ'ನೆಂಬ ಪ್ರತಿಜ್ಞೆ ಅವಳದಾಗಿತ್ತು. 'ಶಂಭುಜಕ್ಕೇಶ್ವರ' ಎಂಬುದು ಈಕೆಯ ಅಂಕಿತನಾಮ.

೧

ತಲೆಯ ಮೇಲೆ ತಲೆಯುಂಟೆ ?<br>
ಹಣೆಯಲ್ಲಿ ಕಣ್ಣುಂಟೆ ?<br>
ಗಳದಲ್ಲಿ ವಿಷವುಂಟೆ ?<br>
ದೇವರೆಂಬವರಿಗೆಂಟೊಡಲುಂಟೆ ?<br>
ತಂದೆಯಿಲ್ಲದವರುಂಟೆ ?<br>
ತಾಯಿಯಿಲ್ಲದವರುಂಟೆ ?<br>
ಎಲವೊ, ನಿನ್ನ ಹಣೆಯಲ್ಲಿ<br>
ನೇಸರುಮೂಡದೆ ?<br>
ಶಂಭುಜಕ್ಕೇಶ್ವರನಲ್ಲದೆ ಉಳಿದ<br>
ದೈವಂಗಳುಂಟೆ ?

೨

ಲಂಚವಂಚನಕ್ಕೆ ಕೈಯಾನದಭಾಷೆ
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ
ನಾನು ಕೈ ಮುಟ್ಟಿ ಎತ್ತಿದೆನಾದರೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ
ಅದೇನು ಕಾರಣವೆಂದರೆ, ನೀವಿಕ್ಕಿದ
ಭಿಕ್ಷದಲ್ಲಿಪ್ಪೆನಾಗಿ
ಇಂತಲ್ಲದೆ ನಾನು ಅಳಿಮನವ ಮಾಡಿ
ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ,
ನೀನಾಗಲೆ ಎನ್ನ ನರಕದಲ್ಲಿ ಅದ್ದಿ
ನೀನೆದ್ದು ಹೋಗಾ
ಶಂಭುಜಕ್ಕೇಶ್ವರಾ.

# ಮುಕ್ತಾಯಕ್ಕ

೧೨ನೆಯ ಶತಮಾನದಲ್ಲಿದ್ದ ಇನ್ನೊಬ್ಬ ಶಿವಶರಣೆ ಮುಕ್ತಾಯಕ್ಕ. ಇವರ ಜನ್ಮಸ್ಥಳ ಲಕ್ಕುಂಡಿ. ಇವರ ಒಟ್ಟು ೩೭ ವಚನಗಳು ದೊರೆತಿವೆ. ಇವರ ಅಂಕಿತನಾಮ ಅಜಗಣ್ಣ.

೧

ಜಲದ ಚಿತ್ತಾರದ ಕೊರಳಿನಲ್ಲಿ
ದಾರವಿಲ್ಲದ ಮುತ್ತಿನ ಸರವು ನೋಡಾ!
ಚಿತ್ತಾರವಳಿಯದೆ, ಮುತ್ತು ಉಳಿಯದೆ
ನಿಂದ ನಿಲವಿನ ಪರಿಯ ನೋಡಾ!
ಗಮನವಿಲ್ಲದ ಗಂಭೀರ, ಶಬುದವಿಲ್ಲದ
ಸಾರಾಯ
ಸಮತೆಯಾಗಿ ನಿಂದ ಅಜಗಣ್ಣಂಗೆ ಇನ್ನಾರು
ಸರಿ ಎಂಬೆನು?

೨

ನುಡಿಯಲುಬಾರದು ಕೆಟ್ಟನುಡಿಗಳ
ನಡೆಯಲುಬಾರದು ಕೆಟ್ಟನಡೆಗಳ
ನುಡಿದಡೇನು ನುಡಿಯದಿರ್ದಡೇನು?
ಹಿಡಿದವ್ರತ ಬಿಡದಿರಲು, ಅದೆ
ಮಹಾಜ್ಞಾನದಾಚರಣೆಂಬೆನು ಅಜಗಣ್ಣ ತಂದೆ.

**ವಿಶೇಷ ಮಾಹಿತಿ:** ಇನ್ನಷ್ಟು ವಚನಗಳು ಮತ್ತು ವಚನಕಾರರ ಬಗ್ಗೆ ತಿಳಿದುಕೊಳ್ಳಲು –

* www.vachanasanchaya.net ಇಲ್ಲಿಗೆ ಸಂಪರ್ಕಿಸಬಹುದು.
* vachana (ವಚನ) ಎಂಬ ಮೊಬೈಲ್ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬಹುದು.

## ನಮ್ಮ ಮಹದಾಶಯ:

ವಚನ ಮಂಟಪದಲ್ಲಿನ ವಚನಕಾರರ ಬಗ್ಗೆ ಮಕ್ಕಳು ತಿಳಿದುಕೊಳ್ಳಲಿ ಮತ್ತು ಇಲ್ಲಿ ಕೊಟ್ಟಿರುವ ವಚನಗಳನ್ನು ಮನೆಯಲ್ಲಿನ ಹಿರಿಯರು ಮತ್ತು ಶಿಕ್ಷಕರ ಸಹಾಯದಿಂದ ಓದಿ ಅವುಗಳ ಮಹತ್ವವನ್ನು ಅರ್ಥ ಮಾಡಿಕೊಳ್ಳಲಿ ಎಂಬುದಾಗಿದೆ. ಇನ್ನಷ್ಟು ವಚನಗಳನ್ನು ಹಾಗೂ ವಚನಕಾರರ ಬಗ್ಗೆ ತಿಳಿದುಕೊಂಡು ಸಾದ್ಯವಾದಷ್ಟು ಅದನ್ನು ಅವರ ನಡೆನುಡಿಯಲ್ಲಿ ಅಳವಡಿಸಿಕೊಳ್ಳಲಿ ಎಂಬುದು ನಮ್ಮ ಆಶಯವಾಗಿದೆ.

**ಸಂಪರ್ಕ ಮಾಹಿತಿ:**
**ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ**
# 76, 'ಪುಷ್ಪಾಂಜಲಿ'
3ನೇ ಅಡ್ಡರಸ್ತೆ, ಶಿವಗಿರಿ
ಧಾರವಾಡ 580 007
**ಮೊ: 998 666 1055**
dhwanitrust@gmail.com /
www. dhwanitrust.org

ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರುವುದು ಅಪೇಕ್ಷಣೀಯ.